ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಂಡೂರು.

ಸಿ. ಸಿ. ಸಂಖ್ಯೆ **528/2015** ಸಿ.ಡಬ್ಲ್ಯೂ **01,** ಪಿ.ಡಬ್ಲ್ಯೂ **01**

| | | |
|---|---|---|
| ಸಾಕ್ಷಿಯ ಹೆಸರು | - ಚಂದ್ರಶೇಖರ | ದಿನಾಂಕ 11-06-2024 |
| ತಂದೆಯ ಹೆಸರು | - ತಿಪ್ಪೆಸ್ವಾಮಿ | ರಂದು ಪ್ರಮಾಣ ವಚನ |
| ವಯಸ್ಸು | - 40 ವರ್ಷ | ಮಾಡಿಸಲಾಯಿತು. |
| ಉದ್ಯೋಗ | - ಅಂಗಡಿ ವ್ಯಾಪಾರ | |
| ವಾಸ ಸ್ಥಳ | - ತೋರಣಗಲ್ಲು | |

**ಮುಖ್ಯ ವಿಚಾರಣೆ ಸಸಅ ರವರಿಂದ**

* * * *

ಸುಮಾರು 10 ವರ್ಷಗಳ ಹಿಂದೆ ನಮ್ಮ ಮನೆಯಲ್ಲಿ ಕಳ್ಳತನವಾಗಿತ್ತು. ನಮ್ಮ ಮನೆಯಲ್ಲಿದ್ದ ಬಂಗಾರದ ಬೆಂಡೋಲೆ, ಬಂಗಾರದ ಕಿವಿ ಚೈನ್ ಮತ್ತು ಬಂಗಾರದ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಹೋಗಿದ್ದರು. ಪೊಲೀಸರು ನಮ್ಮ ಮನೆಗೆ ಬಂದು ಪಂಚನಾಮೆ ಮಾಡಿದ್ದರು. ಆದರೆ ನಮ್ಮ ಮನೆಯಲ್ಲಿ ಇದ್ದ ಬಂಗಾರದ ಆಭರಣಗಳನ್ನು ಯಾರು ಕಳ್ಳತನ ಮಾಡಿದ್ದರೆಂದು ನನಗೆ ಗೊತ್ತಿರುವುದಿಲ್ಲ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ,ಪಿ 1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ 1-ಎ ಎಂದು, ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ,ಪಿ 2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ 2-ಎ ಎಂದು ಗುರುತಿಸಲಾಯಿತು. ನಿ.ಪಿ 2 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ರವರು ಅನುಮತಿ ಕೋರಿರುತ್ತಾರೆ, ಅನುಮತಿಸಲಾಯಿತು.**

**ಪಾಟೀ ಸವಾಲು: ಮಾನ್ಯ ಸ.ಸ.ಅ. ರವರಿಂದ.**

ಯರ್ರಿಸ್ವಾಮಿ ಎನ್ನುವವರ ಬಾಡಿಗೆ ಮನೆಯಲ್ಲಿ ತೋರಣಗಲ್ಲು ಗ್ರಾಮದಲ್ಲಿ ನಾನು ವಾಸವಾಗಿದ್ದೆನು ಎಂದರೆ ಸರಿ. ದಿಃ **05-07-2014** ರಂದು ರಾತ್ರಿ **10-30** ಗಂಟೆಗೆ ನಾವು ಮಲಗಿದ್ದೆವು, ದಿಃ **06-07-2014** ರಂದು ಬೆಳಗಿನಜಾವ **5-00** ಗಂಟೆ ಸಮಯದಲ್ಲಿ ಯಾರೋ ನಮ್ಮ ಮನೆಯಲ್ಲಿದ್ದ ಒಂದುವರೆ ತೊಲೆ ಬಂಗಾರದ ನಕ್ಲೆಸ್, ಒಂದುವರೆ ತೊಲೆ ಬಂಗಾರದ ಬೆಂಡೋಲೆ, ಒಂದು ಬಂಗಾರದ ಉಂಗುರ, ಒಂದು ಜೊತೆ ಬಂಗಾರದ ಕಿವಿ ಚೈನ್ ಕಳ್ಳತನ ಮಾಡಿಕೊಂಡು

ಹೋಗಿದ್ದರು ಎಂದರೆ ಸರಿ. ಸದರಿ ಬಂಗಾರದ ಒಡವೆಗಳನ್ನು ಆರೋಪಿತರು ಕಳ್ಳತನ ಮಾಡಿದ ಬಗ್ಗೆ ನಮಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ಮುಂದೆ ನಾನು ದಿಃ **30-01-2015** ರಂದು ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಮರುಹೇಳಿಕೆಯನ್ನು ನಿ.ಪಿ **3** ಎಂದು ಗುರುತಿಸಲಾಯಿತು. ನಿ.ಪಿ **3** ರಂತೆ ಪೊಲೀಸರ ಮುಂದೆ ಮರುಹೇಳಿಕೆ ನೀಡಿದ್ದೆನು ಎಂದರೆ ಸರಿಯಲ್ಲ. ಪೊಲೀಸರು ದಿಃ **06-07-2014** ರಂದು ತೋರಣಗಲ್ಲು ಗ್ರಾಮದ ನಮ್ಮ ಮನೆಯಲ್ಲಿ ಕಳ್ಳತನವಾದ ಬಗ್ಗೆ ನಿ.ಪಿ **2** ರಂತೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿರುವುದಿಲ್ಲ ಎಂದು ಹೇಳಿರುತ್ತಾರೆ. ಆರೋಪಿತರು ನಮ್ಮ ಮನೆಯಲ್ಲಿನ ಆಭರಣಗಳನ್ನು ಕಳ್ಳತನ ಮಾಡಿದ್ದರು ಸಹ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ ಏನು ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

**ಪ್ರ.ದ.ನ್ಯಾ.ದಂ., ಸಂಡೂರು.**